+32

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಹೇಳಿಕೆ:-**

ವಿಷಯ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೆಂಪೇಗೌಡ ಬಡಾವಣೆ ರಚಿಸಲು ಬೆಂಗಳೂರು ಉತ್ತರ ಹಾಗೂ ದಕ್ಷಿಣ ತಾಲ್ಲೂಕಿನ ಹಲವು ಗ್ರಾಮಗಳ ಸುಮಾರು 4043 ಎಕರೆ 27 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಬೆಂಗಳೂರು ದಕ್ಷಿಣ ಹಾಗೂ ಉತ್ತರ ತಾಲ್ಲೂಕಿನಲ್ಲಿ ಬರುವ ಸೂಲಿಕೆರೆ, ಕೆಂಚನಪುರ ಹಾಗೂ ಕನ್ನಲ್ಲಿ ಗ್ರಾಮದಲ್ಲಿನ ಹೈಟೆಕ್ ವಲಯಕ್ಕೆ ಮೀಸಲಿಟ್ಟಿರುವ ಪ್ರದೇಶದಲ್ಲಿ ಬರುವ ಹಲವು ಜಮೀನುಗಳನ್ನು ರೈತರ ಅನುಮತಿ ಮೇರೆಗೆ ಈ ಬಡಾವಣೆಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲು ಮಾತ್ರ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಅಧಿಸೂಚನೆ ಹೊರಡಿಸಿರುತ್ತಾರೆ. ನಂತರ ಈ ಜಮೀನುಗಳನ್ನು ಭೂಸ್ವಾಧೀನ ವಿಭಾಗದಿಂದ ಅಭಿಯಂತರ ಶಾಖೆಗೆ ವರ್ಗಾಯಿಸಿದ್ದು, ಬಡಾವಣೆ ನಕ್ಷೆಯನ್ನು ರಚಿಸುವಾಗ ಭೂಸ್ವಾಧೀನ ವಿಭಾಗದಿಂದ ಅಂತಿಮ ಅಧಿಸೂಚನೆಗಿಂತ ಮುಂಚೆ ತಯಾರಾದ ಯೋಜನಾ ನಕ್ಷೆಯನ್ನು ಪರಿಗಣಿಸದೆ ಯಾವ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅದನ್ನು ಮರೆಮಾಚಿ ತಮಗಿಷ್ಟ ಬಂದ ರೀತಿಯಲ್ಲಿ ನಿವೇಶನಗಳನ್ನು ರಚಿಸಿ, ಪ್ರಾಧಿಕಾರಕ್ಕೆ ಹಾಗೂ ಸರ್ಕಾರಕ್ಕೆ ಕೋಟ್ಯಾಂತರ ರೂಗಳನ್ನು ನಷ್ಟ ಮಾಡಿರುತ್ತಾರೆ. ಅದೇ ರೀತಿ ಮಾಗಡಿ ರಸ್ತೆಯಿಂದ ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಪೆರಿಫೆರಲ್ ರಸ್ತೆಗೂ ಕೆಲವು ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡು ಉದ್ದೇಶಿತ ಅಳತೆಯ ರಸ್ತೆಯನ್ನು ಮಾಡದೆ ಚಿಕ್ಕ ರಸ್ತೆ ಮಾಡಿ ರಸ್ತೆಯ ಇಕ್ಕೆಲಗಳಲ್ಲಿ ನಿವೇಶನ ರಚಿಸುತ್ತಿದ್ದು, ಭೂಸ್ವಾಧೀನದಿಂದ ಉಳಿದ ಜಮೀನುಗಳಿಗೆ ರಸ್ತೆ ಸಂಪರ್ಕವಿಲ್ಲದಂತಾಗುತ್ತದೆ. ಆದ್ದರಿಂದ ಬೆಂಗಳೂರು ದಕ್ಷಿಣ ಹಾಗೂ ಉತ್ತರ ತಾಲ್ಲೂಕಿನಲ್ಲಿ ಕೆಂಪೇಗೌಡ ಬಡಾವಣೆ ಹಾಗೂ ಪೆರಿಫೆರಲ್ ರಸ್ತೆಗೆ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಯಾವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅದೇ ಮೂಲ ಉದ್ದೇಶಕ್ಕೆ ಬಳಸಿಕೊಳ್ಳಬೇಕು ಹಾಗೂ ಈ ರೀತಿ ಕಾನೂನು ಹಾಗೂ ನಿಯಮ ಉಲ್ಲಂಘನೆ ಮಾಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ.

ಉತ್ತರ :-

ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಿಸಲು ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿಯ 4 ಗ್ರಾಮಗಳಾದ ಶೀಗೇಹಳ್ಳಿ, ಕೊಡಿಗೇಹಳ್ಳಿ, ಕನ್ನಲ್ಲಿ, ಮಂಗನಹಳ್ಳಿ ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕ್, ಕೆಂಗೇರಿ ಹೋಬಳಿಯ 8 ಗ್ರಾಮಗಳಾದ ಕೊಮ್ಮಘಟ್ಟ, ಭೀಮನಕುಪ್ಪೆ, ಭೀಮನಕುಪ್ಪೆ ರಾಮಸಾಗರ, ಸೂಲಿಕೆರೆ, ಕೆಂಚನಪುರ, ರಾಮಸಂದ್ರ, ಕೊಮ್ಮಘಟ್ಟ ಕೃಷ್ಣಸಾಗರ ಹಾಗೂ ಚಲ್ಲಘಟ್ಟ ಒಟ್ಟು 12 ಗ್ರಾಮಗಳಲ್ಲಿ 4043 ಎಕರೆ 27 ಗುಂಟೆ ಜಮೀನಿನಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣ ಮಾಡಲು ಸರ್ಕಾರಿ ಆದೇಶದ ಸಂಖ್ಯೆ: UDD/51/MNX/2010 ದಿನಾಂಕ: 18/02/2010 ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದರಂತೆ, 39401 ವಿವಿಧ ಅಳತೆಗಳ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಲು ಯೋಜಿಸಲಾಗಿರುತ್ತದೆ.

ಸರ್ಕಾರದಿಂದ ದಿನಾಂಕ 25/06/2007 ರಂದು ಅನುಮೋದನೆಯಾಗಿರುವ ಪರಿಷ್ಕೃತ ಮಹಾಯೋಜನೆ-2015 (ಆರ್.ಎಂ.ಪಿ-2015) ರಲ್ಲಿ ಕೊಡಿಗೇಹಳ್ಳಿ ಮತ್ತು ಸೂಲಿಕೆರ ಗ್ರಾಮಗಳ ಅಧಿಸೂಚನೆ ಪ್ರದೇಶದಲ್ಲಿ 209 ಎಕರೆ 38 ಗುಂಟೆ ವಿಸ್ತೀರ್ಣದ ಜಮೀನು ಹೈಟೆಕ್ ವಲಯದಲ್ಲಿರುತ್ತದೆ.

ಪ್ರಾಧಿಕಾರವು ಬಡಾವಣೆ ನಿರ್ಮಾಣದ ಉದ್ದೇಶಕ್ಕಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದು, ಅದೇ ಉದ್ದೇಶಕ್ಕೆ ಅಂದರೆ ಬಡಾವಣೆ ನಿವೇಶನಗಳು, ರಸ್ತೆಗಳು ಹಾಗೂ RMP-2015 ರ ವಲಯ ನಿಯಮಾವಳಿಯ ಪ್ರಕಾರ ರಸ್ತೆಯನ್ನು ನಿರ್ಮಾಣ ಮಾಡಲು ಜಮೀನನ್ನು ಬಳಸಿಕೊಳ್ಳಲಾಗುತ್ತಿದೆ. ಬಡಾವಣೆ ರಚನೆಯಲ್ಲಿ ಕೈಬಿಟ್ಟಿರುವ ಜಮೀನುಗಳಿಗೂ ಸಹ ಸಂಪರ್ಕ ರಸ್ತೆಗಳನ್ನು ಕಲ್ಪಿಸಲು ಯೋಜಿಸಲಾಗಿದೆ.

ಮಾಗಡಿ ರಸ್ತೆಯಿಂದ ಮೈಸೂರು ರಸ್ತೆವರೆಗೆ ನಾಡಪ್ರಭು ಕೆಂಪೇಗೌಡ ಬಡಾವಣೆಯ ಮುಖಾಂತರ ಹಾದು ಹೋಗುವ ಮುಖ್ಯ ಸಂಪರ್ಕ ರಸ್ತೆ ನಿರ್ಮಾಣದ ಉದ್ದೇಶಕ್ಕಾಗಿ ಪ್ರಾಥಮಿಕ ಅಧಿಸೂಚನೆ ಸಂಖ್ಯೆ:BDA/Commr/DC(LA)/SLAO/115/2005-06 dated 12/12/2005 & Karnataka Gazette dated 16/11/2006 in Part III at Page 1 to 56 vide Preliminary Notification No.BDA/Comm/DC(LA)SALAO/80/2006-07 dt:15/11/2006 ರಲ್ಲಿ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:UDD/169/MNX/2011, Dt:27/07/2011 ರಲಿ 321 ಎಕರೆ 10 ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ, ಉದ್ದೇಶಿತ ಮುಖ್ಯ ಸಂಪರ್ಕ ರಸ್ತೆಯು 100.00 ಮೀ ಅಗಲದ ಮುಖ್ಯ ಸಂಪರ್ಕ ರಸ್ತೆಯಾಗಿದ್ದು, ರಸ್ತೆ ನಿರ್ಮಾಣಕ್ಕಾಗಿ ಇದುವರೆವಿಗೂ 181 ಎಕರೆ 21 ಗುಂಟೆ ಜಮೀನನ್ನು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ಇದರಲ್ಲಿ ಈಗಾಗಲೇ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ವಿನ್ಯಾಸ ಅನುಮೋದನೆಗೆ ಪರಿಗಣಿಸಲಾದ ಉದ್ದೇಶಿತ ಜಮೀನುಗಳು ಆರ್.ಎಂ.ಪಿ–2015 ರ ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದ ಜಮೀನುಗಳಾಗಿರುತ್ತವೆ. ಆರ್.ಎಂ.ಪಿ–2015 ರ ಮಹಾಯೋಜನೆಯಲ್ಲಿ ತುಮಕೂರು ರಸ್ತೆಯಿಂದ ಹೊಸೂರು ರಸ್ತೆಯವರೆಗೆ ಸಂಪರ್ಕ ಕಲ್ಪಿಸಲು 100.0ಮೀ ಅಗಲದ ಹೊರವರ್ತುಲ ರಸ್ತೆಯನ್ನು (ಪಿ.ಆರ್.ಆರ್) ಪ್ರಸ್ತಾಪಿಸಲಾಗಿರುತ್ತದೆ. ಸದರಿ ರಸ್ತೆಯ ಪಂಕ್ತೀಕರಣವು ಪ್ರಾಧಿಕಾರದಿಂದ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಕೆಂಪೇಗೌಡ ಬಡಾವಣೆಯಲ್ಲಿಯೂ ಕೂಡ ಹಾದು ಹೋಗಿರುತ್ತದೆ. ವಸತಿ ಬಡಾವಣೆ ಯೋಜನಾ ನಕ್ಷೆಯಲ್ಲಿ ಆರ್.ಎಂ.ಪಿ–2015 ರಂತೆ ಪಂಕ್ತೀಕರಣವನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

ಉದ್ದೇಶಿತ ಮುಖ್ಯ ಸಂಪರ್ಕ ರಸ್ತೆಯನ್ನು (ಪಿ.ಆರ್.ಆರ್–2) ಅನುಮೋದನೆಯಾಗಿರುವ ನಕ್ಷೆಯಂತೆ ನಿರ್ಮಾಣ ಮಾಡಲಾಗುತ್ತಿದ್ದು, ಮುಖ್ಯ ಸಂಪರ್ಕ ರಸ್ತೆಗೆ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಉದ್ದೇಶಿತ 100.00 ಮೀ ಅಗಲದಲ್ಲಿ 06 ಪಥಗಳ 3.00 ಮೀ ಮೀಡಿಯನ್ ಒಳಗೊಂಡ 10.00 ಮೀ ಅಗಲದ 2 ಮುಖ್ಯ ರಸ್ತೆ ಹಾಗೂ ರಸ್ತೆ ಇಕ್ಕೆಲಗಳಲ್ಲಿ ಎರಡು Buolevard ಜಾಗಗಳನ್ನು ಹಾಗೂ 02 ಪಥಗಳ 9.00 ಮೀಟರ್ ಅಗಲಕ್ಕೆ ಎರಡು ಸರ್ವಿಸ್ ರಸ್ತೆಗಳ ನಿರ್ಮಾಣಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

ಸಂಖ್ಯೆ: ನಅಇ 327 ಬೆಂಭೂಸ್ವಾ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



CAN – 37 330 – 18 13/9